## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 895(889)

ಸದಸ್ಯರ ಹೆಸರು : ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 15.12.2025.

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಪ್ರೌಢಶಾಲೆ ಮತ್ತು ಅನುದಾನಿತ ಪ್ರೌಢಶಾಲಾ ತರಗತಿಗಳ ವಿದ್ಯಾರ್ಥಿ / ಶಿಕ್ಷಕರ ಅನುಪಾತವನ್ನು ಸರ್ಕಾರ ನಿಗಧಿಪಡಿಸಿದೆಯೇ; (ಮಾಹಿತಿ ನೀಡುವುದು); | **ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ**<br>ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ 70 ವಿದ್ಯಾರ್ಥಿಗಳಿಗೆ 01 ವಿಭಾಗದಂತೆ ವಿಂಗಡಿಸಿ ಕನಿಷ್ಠ 04 ವಿಭಾಗಗಳವರೆಗಿನ ಏಕ ಮಾಧ್ಯಮ ಪ್ರೌಢ ಶಾಲೆಗಳಲ್ಲಿ ಸಿಬ್ಬಂದಿ ಸ್ವರ ವಿನ್ಯಾಸ ಪ್ರಕಾರ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ 07 ಹುದ್ದೆಗಳು ಇರಬೇಕು. (ಪ್ರಥಮ ಭಾಷೆ 01, ದ್ವಿತೀಯ ಭಾಷೆ 01, ತೃತೀಯ 01, ಕಲಾ 01, ಗಣಿತ (ಪಿಸಿಎಂ) 01, ವಿಜ್ಞಾನ (ಸಿಬಿಝಡ್) 01 ಮತ್ತು ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್ -1) 01 ರಂತೆ ನಿಗದಿಪಡಿಸಲಾಗಿದೆ. ಸದರಿ ಶಾಲೆಗಳಲ್ಲಿ 05 ಅಥವಾ 05ಕ್ಕಿಂತ ಹೆಚ್ಚು ವಿಭಾಗಗಳು ಇದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1.5 ಶಿಕ್ಷಕರನ್ನು ನೀಡಲಾಗುತ್ತಿದೆ.<br>**ಖಾಸಗಿ ಅನುದಾನಿತ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ**<br>ಖಾಸಗಿ ಅನುದಾನಿತ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನೇಮಕಾತಿ ನಿಯಮ 1999 ರ ಅನೆಕ್ಷರ್ -04 (1) ರಂತೆ ವಿದ್ಯಾರ್ಥಿ / ಶಿಕ್ಷಕರ ಅನುಪಾತವನ್ನು ಒಂದು ವಿಭಾಗಕ್ಕೆ ಗರಿಷ್ಠ 70 ವಿದ್ಯಾರ್ಥಿಗಳನ್ನು ನಿಗದಿಪಡಿಸಲಾಗಿರುತ್ತದೆ. |

| | | |
|---|---|---|
| ಆ) | ಸರ್ಕಾರ ನಿಗಧಿಪಡಿಸಿರುವ ಸರ್ಕಾರಿ ಪ್ರೌಢಶಾಲೆ ಮತ್ತು ಅನುದಾನಿತ ಪ್ರೌಢಶಾಲಾ ತರಗತಿಗಳ ವಿದ್ಯಾರ್ಥಿ / ಶಿಕ್ಷಕರ ಅನುಪಾತವು ಪ್ರಸ್ತುತ 70.1 ಆಗಿದ್ದು ಇದನ್ನು ವಿದ್ಯಾರ್ಥಿಗಳ / ಶಿಕ್ಷಕರ ಹಿತದೃಷ್ಟಿಯಿಂದ 40.1 ರಂತೆ ಮರು ನಿಗಧಿಪಡಿಸಲು ಕ್ರಮ ಕೈಗೊಳ್ಳಲಾಗುವುದೇ? (ಮಾಹಿತಿ ಒದಗಿಸುವುದು); | ಸರ್ಕಾರಿ ಪ್ರೌಢಶಾಲೆ ಮತ್ತು ಅನುದಾನಿತ ಪ್ರೌಢಶಾಲಾ ತರಗತಿಗಳ ವಿದ್ಯಾರ್ಥಿ / ಶಿಕ್ಷಕರ ಅನುಪಾತವನ್ನು 40.1 ರಂತೆ ಮರು ನಿಗಧಿಪಡಿಸುವ ಸಂಬಂಧ ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ಇಪಿ 377 ಎಸ್‌ಇಎಸ್ 2025

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು